# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀ ಹಂಪಯ್ಯ ಎಸ್ ನಾಟೇಕಾರ, ಲೆಕ್ಕಾಧೀಕ್ಷಕರು, ಹೊಲಗಾಲುವೆ ವಿಭಾಗ-1, ಕೃಷ್ಣಾ ಕಾಡಾ ಭೀಮರಾಯನಗುಡಿ ಇವರಿಗೆ ಪ್ರಭಾರ ಭತ್ಯೆ ಮಂಜೂರು ಮಾಡುವ ಕುರಿತು.

**ಓದಲಾಗಿದೆ:** 1.ಆಡಳಿತಾಧಿಕಾರಿ, ಕೃಷ್ಣಾ ಕಾಡಾ, ಭೀಮರಾಯನಗುಡಿ, ಇವರ ಕ ಛೇರಿ ಸಂಖ್ಯೆ: ಅ.ಅ/ಕೃಷ್ಣಾ ಕಾಡಾ/ಆ.ಶಾ/ 2019-20/ 2977 ದಿನಾಂಕ:29.02.2021 .

2. .ಆಡಳಿತಾಧಿಕಾರಿ, ಕೃಷ್ಣಾ ಕಾಡಾ, ಭೀಮರಾಯನಗುಡಿ, ಇವರ ಕಛೇರಿ ಪತ್ರ ಸಂಖ್ಯೆ:ಕಾಡಾ/ ಸಿ-2/ಪ್ರ.ಭ/ 2021-22/551, ದಿನಾಂಕ:14.07.2021

3. ನಿರ್ದೇಶಕರು, ಕಾಡಾ ನಿರ್ದೇಶನಾಲಯ, ಬೆಂಗಳೂರು ಇವರ ಪತ್ರ ಸಂಖ್ಯೆ:ನಿಕಾನಿ/ ಆಶಾ/ಸಿ-3/ಪ್ರ.ಭ./ ಭೀ.ಗುಡಿ/ 2021-22/911 ದಿನಾಂಕ: 22.10.2021

* * * * *

**ಪ್ರಸ್ತಾವನೆ:**

ಆಡಳಿತಾಧಿಕಾರಿ, ಕೃಷ್ಣಾ ಕಾಡಾ, ಭೀಮರಾಯನಗುಡಿ, ಇವರ ಮೇಲೆ ಕ್ರಮಾಂಕ (1)ರಲ್ಲಿ ಓದಲಾದ ದಿನಾಂಕ:29.02.2021ರ ಆದೇಶದಲ್ಲಿ ಶ್ರೀ ಹಂಪಯ್ಯ ಎಸ್ ನಾಟೇಕಾರ, ಲೆಕ್ಕಾಧೀಕ್ಷಕರು ಇವರಿಗೆ ಮುಖ್ಯ ಲೆಕ್ಕಾಧಿಕಾರಿಗಳು, ಕೃಷ್ಣಾ ಕಾಡಾ ಭೀಮರಾಯನಗುಡಿ ಕಛೇರಿಯ ಲೆಕ್ಕಾಧೀಕ್ಷಕರ ಹುದ್ದೆಯ ಪ್ರಭಾರವನ್ನು ವಹಿಸಿಕೊಳ್ಳುವಂತೆ ಸೂಚಿಸಲಾಗಿರುತ್ತದೆ. ಅದರಂತೆ ಶ್ರೀಯುತರು ದಿನಾಂಕ:07.09.2020 ರಿಂದ ದಿನಾಂಕ:31.05.2021ರವರೆಗೆ ಲೆಕ್ಕಾಧೀಕ್ಷಕರು ಹುದ್ದೆಯ ಅಧಿಕ ಪ್ರಭಾರವನ್ನು ವಹಿಸಿಕೊಂಡು ಕರ್ತವ್ಯ ನಿರ್ವಹಿಸಿದ್ದು, ಸದರಿಯವರು ದಿನಾಂಕ:31.05.2021 ರಂದು ಸೇವೆಯಿಂದ ವಯೋನಿವೃತ್ತಿ ಹೊಂದಿರುತ್ತಾರೆ.

ಆಡಳಿತಾಧಿಕಾರಿ, ಕಾಡಾ ಭೀಮರಾಯನಗುಡಿ ಇವರ ಮೇಲೆ ಕ್ರಮಾಂಕ (2)ರಲ್ಲಿ ಓದಲಾದ ದಿನಾಂಕ:14.07.2021ರ ಪತ್ರದಲ್ಲಿ ಶ್ರೀಯುತರಿಗೆ ದಿನಾಂಕ:07.09.2020 ರಿಂದ ದಿನಾಂಕ:31.05.2021ರವರೆಗಿನ ಅವಧಿಯ ಪ್ರಭಾರ ಭತ್ಯೆಯನ್ನು ಮಂಜೂರು ಮಾಡುವಂತೆ ಕೋರಿ ಪ್ರಸ್ತಾವನೆಯನ್ನು ನಿರ್ದೇಶಕರು, ಕಾಡಾ ನಿರ್ದೇಶನಾಲಯ, ಬೆಂಗಳೂರು ಇವರಿಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಿರುತ್ತಾರೆ.

ನಿರ್ದೇಶಕರು, ಕಾಡಾ ನಿರ್ದೇಶನಾಲಯ, ಬೆಂಗಳೂರು ಇವರ ಮೇಲೆ ಕ್ರಮಾಂಕ (3)ರಲ್ಲಿ ಓದಲಾದ ದಿನಾಂಕ:22.10.2021ರ ಪತ್ರದಲ್ಲಿ ಶ್ರೀ ಹಂಪಯ್ಯ ಎಸ್ ನಾಟೇಕಾರ, ಲೆಕ್ಕಾಧೀಕ್ಷಕರು, ಹೊಲಗಾಲುವೆ ವಿಭಾಗ-1, ಕೃಷ್ಣಾ ಕಾಡಾ ಭೀಮರಾಯನಗುಡಿ ಇವರು ಮುಖ್ಯ ಲೆಕ್ಕಾಧಿಕಾರಿ, ಕೃಷ್ಣಾ ಕಾಡಾ ಭೀಮರಾಯನಗುಡಿ ಹುದ್ದೆಯ ಹೆಚ್ಚುವರಿ ಪ್ರಭಾರ ಅವಧಿ ಅಂದರೆ ದಿನಾಂಕ:7.9.2020ರಿಂದ 31.05.2021ರವರೆಗಿನ ಪ್ರಭಾರ ಭತ್ಯೆಯನ್ನು ಮಂಜೂರು ಮಾಡಲು ಅಗತ್ಯ ದಾಖಲೆಗಳೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ:ಜಸಂಇ 32 ಸಿಯುಕೆ 2021 (ಇ-ಆಫೀಸ್)**
**ಬೆಂಗಳೂರು, ದಿನಾಂಕ:21.02.2022**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಶ್ರೀ ಹಂಪಯ್ಯ ಎಸ್ ನಾಟೇಕಾರ, ಲೆಕ್ಕಾಧೀಕ್ಷಕರು, ಹೊಲಗಾಲುವೆ ವಿಭಾಗ-1, ಕೃಷ್ಣಾ ಕಾಡಾ ಭೀಮರಾಯನಗುಡಿ ಇವರು ಮುಖ್ಯ ಲೆಕ್ಕಾಧಿಕಾರಿ, ಕೃಷ್ಣಾ ಕಾಡಾ ಭೀಮರಾಯನಗುಡಿ ಕಛೇರಿಯ ಲೆಕ್ಕಾಧೀಕ್ಷಕರ ಹುದ್ದೆಯ ಹೆಚ್ಚುವರಿ ಪ್ರಭಾರದಲ್ಲಿ ಕಾರ್ಯನಿರ್ವಹಿಸಿದ ಅವಧಿ ಅಂದರೆ ದಿನಾಂಕ: 7.9.2020 ರಿಂದ 31.05.2021ರವರೆಗಿನ ಅವಧಿಯಲ್ಲಿ ಸಾಂದರ್ಭಿಕ ರಜೆ ಅಥವಾ ದೀರ್ಘಾವಧಿ ರಜೆ ಹಾಗೂ ದೀರ್ಘಕಾಲೀನ ತರಬೇತಿ ಅವಧಿಯನ್ನು ಹೊರತುಪಡಿಸಿ, ಉಳಿದ ಅವಧಿಗೆ ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 08 ಎಸ್‌ಆರ್‌ಎಸ್ 2018, ದಿನಾಂಕ:30.04.2019 ಹಾಗೂ ಕರ್ನಾಟಕ ನಾಗರೀಕ ಸೇವಾ ನಿಯಮಗಳು, 1958ರ ನಿಯಮ 68ರನ್ವಯ, ಸದರಿ ಹೆಚ್ಚುವರಿ ಪ್ರಭಾರ ಹುದ್ದೆಯ ಹಾಲಿ ವೇತನದ ಶ್ರೇಣಿಯಾದ ರೂ.40900-78200ರಲ್ಲಿ ಕನಿಷ್ಠ ಮೂಲ ವೇತನವಾದ ರೂ.40900ಕ್ಕೆ ಅಧಿಕ ಪ್ರಭಾರದಲ್ಲಿದ್ದ ಅವಧಿಯಲ್ಲಿ ದಿನಾಂಕ:7.9.2020 ರಿಂದ 31.05.2021ರ ಅವಧಿಗೆ ಪ್ರತಿ ಮಾಹೆ ಶೇಕಡ 15ರ ದರದಲ್ಲಿ ಪ್ರಭಾರ ಭತ್ಯೆಯನ್ನು ಮಂಜೂರು ಮಾಡಿ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಂ.ಎ. ಮಹಾಲಕ್ಷ್ಮಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ (ಕಾಡಾ) (ಪ್ರ)
22-02-2022

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು (ಎ & ಇ) (ಜಿ & ಎಸ್‌ಎಸ್‌ಎ) ಮತ್ತು (ಇ & ಆರ್‌ಎಸ್‌ಎ) ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರಗಳ ನಿರ್ದೇಶನಾಲಯ, 1ನೇ ಬ್ಲಾಕ್, ರಾಜಾಜಿನಗರ, ಡಾ: ರಾಜ್‌ಕುಮಾರ್ ರಸ್ತೆ, ಬೆಂಗಳೂರು-10.
3. ಆಡಳಿತಾಧಿಕಾರಿ, ಕಾಡಾ, ಕೃಷ್ಣಾ ಮೇಲ್ದಂಡೆ ಯೋಜನೆ, ಭೀಮರಾಯನಗುಡಿ,
4. ಸಂಬಂಧಿಸಿದ ಅಧಿಕಾರಿಗಳಿಗೆ (ಕೃಷ್ಣಾ ಕಾಡಾ, ಭೀಮರಾಯನಗುಡಿ ಆಡಳಿತಾಧಿಕಾರಿ ಮುಖಾಂತರ)
5. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.